# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 354
2) ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 21-12-2022
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಕೆರೆಗಳಲ್ಲಿ ಮೀನುಗಾರಿಕೆ ಇಲಾಖೆ ಮೀನುಮರಿಗಳ ಸಾಕಾಣಿಕೆಯನ್ನು ನಡೆಸುತ್ತಿದ್ದರೂ ಸರ್ಕಾರವು ಈ ಯೋಜನೆಗೆ ನಿಗದಿಪಡಿಸಿದ ಅನುದಾನವೆಷ್ಟು; ಎಷ್ಟು ಕೆರೆಗಳಲ್ಲಿ ಇಲಾಖಾ ವತಿಯಿಂದ ಮೀನುಮರಿಗಳ ಸಾಕಾಣಿಕೆ ನಡೆಸುತ್ತಿದೆ;<br>(ಜಿಲ್ಲಾವಾರು ಮಾಹಿತಿ ಒದಗಿಸುವುದು) | **ಮೀನುಗಾರಿಕೆ ಇಲಾಖೆಯಿಂದ ರಾಜ್ಯದ ಕೆರೆಗಳಲ್ಲಿ ಮೀನುಮರಿಗಳ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಲಾಗಿದೆ.**<br>1) ಮೀನುಮರಿ ಖರೀದಿಗೆ ಸಹಾಯಧನ ರೂ.25.00 ಲಕ್ಷ<br>2) ಕೆರೆ / ಜಲಾಶಯ ಅಂಚಿನಲ್ಲಿ ಮೀನುಮರಿ ಪಾಲನೆಗೆ ಸಹಾಯಧನ ರೂ.100.00 ಲಕ್ಷ<br>3) ಗ್ರಾಮ ಪಂಚಾಯಿತಿಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ ರೂ.565.00 ಲಕ್ಷ<br>ಮೀನುಗಾರಿಕೆ ಇಲಾಖಾ ವತಿಯಿಂದ ಯಾವುದೇ ಕೆರೆಗಳಲ್ಲಿ ಮೀನುಮರಿಗಳ ಸಾಕಾಣಿಕೆ ಕೈಗೊಂಡಿರುವುದಿಲ್ಲ. ಇಲಾಖೆಯಿಂದ ಕೆರೆಗಳನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರರು ಕೆರೆಗಳಲ್ಲಿ ಮೀನು ಸಾಕಾಣಿಕೆ ಕೈಗೊಂಡಿರುತ್ತಾರೆ.<br>2022-23ನೇ ಸಾಲಿನಲ್ಲಿ ರಾಜ್ಯದ ಇಲಾಖಾ ವ್ಯಾಪ್ತಿಯ ದೊಡ್ಡ ಕೆರೆಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲಾದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಮೀನುಮರಿಗಳ ಸಾಕಾಣಿಕೆಯ ನಂತರದ ಮೀನುಗಳ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯದ ಮೊತ್ತವೆಷ್ಟು?<br>(ಜಿಲ್ಲಾವಾರು ಮಾಹಿತಿ ನೀಡುವುದು) | ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರರ ಸಹಕಾರ ಸಂಘ / ಮೀನುಗಾರರ ಉತ್ಪಾದಕರ ಸಂಸ್ಥೆಗಳಿಗೆ ನೇರ ಗುತ್ತಿಗೆ ಮೂಲಕ ಹಾಗೂ ವೈಯಕ್ತಿಕವಾಗಿ ಪಡೆಯಲಿಚ್ಛಿಸುವವರಿಗೆ ಮೀನು ಪಾಶುವಾರು ಹಕ್ಕು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ಅದರಂತೆ, ಗುತ್ತಿಗೆ / ಬಿಡ್ ದಾರರು ಮೀನುಮರಿ ಸಾಕಾಣಿಕೆಯ ನಂತರ ಮೀನುಗಳ ಮಾರಾಟದಿಂದ ಆದಾಯವನ್ನು ಗಳಿಸಿಕೊಳ್ಳುತ್ತಾರೆ. ಮೀನುಗಳ ಮಾರಾಟದಿಂದ ಸರ್ಕಾರಕ್ಕೆ ಆದಾಯ ಸ್ವೀಕೃತವಾಗುವುದಿಲ್ಲ. |

ಸಂಖ್ಯೆ: ಪಸಂಮೀ ಇ-263 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಕರ್ನಾಟಕ ಸರ್ಕಾರ

## ಶ್ರೀ.ಅ.ದೇವೇಗೌಡ (ಪದವೀಧರರ ಕ್ಷೇತ್ರ) L.C.Q-354

| ಕ್ರ.ಸಂ | ಜಿಲ್ಲೆ | 2022-23ನೇ ಸಾಲಿನಲ್ಲಿ ವಿಲೇವಾರಿಯಾದ ಕೆರೆಗಳ ವಿವರ | | | ಒಟ್ಟು |
|---|---|---|---|---|---|
| | | ನೇರಗುತ್ತಿಗೆ | ಟೆಂಡರ್ ಕಂ ಹರಾಜು | ಪರವಾನಗಿ | |
| 1 | ಬೆಂಗಳೂರು ನಗರ | 68 | 79 | 0 | 147 |
| 2 | ಬೆಂಗಳೂರು ಗ್ರಾಮಾಂತರ | 5 | 72 | 0 | 77 |
| 3 | ಬಾಗಲಕೋಟೆ | 21 | 17 | 0 | 38 |
| 4 | ಬಳ್ಳಾರಿ | 5 | 11 | 1 | 17 |
| 5 | ಬೀದರ್ | 22 | 29 | 0 | 51 |
| 6 | ಬಿಜಾಪುರ | 1 | 0 | 65 | 66 |
| 7 | ಬೆಳಗಾವಿ | 31 | 91 | 373 | 495 |
| 8 | ತುಮಕೂರು | 46 | 286 | 3 | 335 |
| 9 | ಚಾಮರಾಜನಗರ | 22 | 45 | 1 | 68 |
| 10 | ಚಿಕ್ಕಬಳ್ಳಾಪುರ | 8 | 149 | 0 | 157 |
| 11 | ಚಿಕ್ಕಮಗಳೂರು | 15 | 69 | 78 | 162 |
| 12 | ಚಿತ್ರದುರ್ಗ | 5 | 103 | 18 | 126 |
| 13 | ದಾವಣಗೆರೆ | 27 | 46 | 0 | 73 |
| 14 | ಮಂಗಳೂರು | 0 | 0 | 0 | 0 |
| 15 | ಧಾರವಾಡ | 15 | 106 | 0 | 121 |
| 16 | ಗದಗ | 7 | 11 | 0 | 18 |
| 17 | ಗುಲಬರ್ಗಾ | 31 | 46 | 0 | 77 |
| 18 | ಹಾಸನ | 18 | 111 | 284 | 413 |
| 19 | ಹಾವೇರಿ | 28 | 138 | 0 | 166 |
| 20 | ಕಾರವಾರ | 11 | 77 | 0 | 88 |
| 21 | ಕೊಡಗು | 0 | 6 | 0 | 6 |
| 22 | ಕೋಲಾರ | 12 | 80 | 4 | 96 |
| 23 | ಕೊಪ್ಪಳ | 21 | 28 | 0 | 49 |
| 24 | ಮಂಡ್ಯ | 49 | 45 | 6 | 100 |
| 25 | ಮೈಸೂರು | 38 | 35 | 0 | 73 |
| 26 | ರಾಯಚೂರು | 20 | 37 | 0 | 57 |
| 27 | ರಾಮನಗರ | 27 | 49 | 0 | 76 |
| 28 | ಶಿವಮೊಗ್ಗ | 17 | 333 | 1 | 351 |
| 29 | ಉಡುಪಿ | 0 | 5 | 0 | 5 |
| 30 | ಯಾದಗಿರಿ | 10 | 56 | 0 | 66 |
| | ಒಟ್ಟು | 580 | 2160 | 834 | 3574 |